ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) 2 ಮಿನಿ ಬಸ್ ಡಿಪೋ ನಿರ್ಮಿಸಲು ಉದ್ದೇಶಿಸಿದೆ.

ಆ) ಗಜೇಂದ್ರಗಡದಲ್ಲಿ ನಾಲ್ಕು ನಿವೇಶನಗಳನ್ನು ಪರಿಶೀಲಿಸಲಾಗಿದ್ದು, ಅದರಲ್ಲಿ ಒಂದು ಅನುಕೂಲಕರವಾದ ನಿವೇಶನವನ್ನು ಸಂಸ್ಥೆಯ ವಶಕ್ಕೆ ತೆಗೆದುಕೊಂಡ ನಂತರ ಮಿನಿ ಘಟಕ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಅತಿವೃಷ್ಟಿಯ ಬಗ್ಗೆ ಉಡುಪಿ ಜಿಲ್ಲೆಗೆ ಬಿಡುಗಡೆ ಮಾಡಿದ ಹಣದ ಬಗ್ಗೆ

2996 - ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಅತಿವೃಷ್ಟಿಯಿಂದ ಹಾನಿಯಾದ ರಸ್ತೆಗಳ ವಿವರ?

ಆ) ಉಡುಪಿ ಜಿಲ್ಲೆಯಲ್ಲಿ ಅತಿ ವೃಷ್ಟಿಯಿಂದ ರಸ್ತೆಗಳು ಹಾಳಾಗಿರುವುದು ನಿಜವಲ್ಲವೆ?

ಇ) ಹಾಗಿದ್ದಲ್ಲಿ ಈ ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣವೆಷ್ಟು ವಿವರ ನೀಡುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಾದ್ಯಂತ ಅತಿವೃಷ್ಟಿಯಿಂದ 12413 ಕಿ.ಮೀಗಳಷ್ಟು ರಸ್ತೆ ಹಾನಿಗೊಳಗಾಗಿದ್ದು ಒಟ್ಟು ನಷ್ಟವನ್ನು ರೂ.29,815.02 ಲಕ್ಷಗಳೆಂದು ಅಂದಾಜು ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ ದಲ್ಲಿ ಲಗತ್ತಿಸಲಾಗಿದೆ.)

ಆ) ಹೌದು.

ಇ) ಉಡುಪಿ ಜಿಲ್ಲೆಯಲ್ಲಿ 432 ಕಿ.ಮೀ ಗಳಷ್ಟು ರಸ್ತೆಗಳು ಅತಿವೃಷ್ಟಿಯಲ್ಲಿ ಹಾನಿಗೊಳಗಾಗಿದ್ದು ಒಟ್ಟು ನಷ್ಟವನ್ನು ರೂ.1036.80 ಲಕ್ಷಗಳೆಂದು ಅಂದಾಜು ಮಾಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರುಗಳು	ಹಾನಿಗೊಳಗಾದ ರಸ್ತೆಗಳ ವಿವರ	
		ಕಿ.ಮೀ.ಗಳಲ್ಲಿ	ನಷ್ಟ ರೂ.ಗಳಲ್ಲಿ
1	ಬೆಂಗಳೂರು (ಗ್ರಾ)	597	1492.5
2	ಬೆಂಗಳೂರು (ನ)	381	876.3
3	ಬಾಗಲಕೋಟೆ	44	114.4
4	ಬೆಳಗಾಂ	393	864.6

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರುಗಳು	ಹಾನಿಗೊಳಗಾದ ರಸ್ತೆಗಳ ವಿವರ	
		ಕಿ.ಮೀ.ಗಳಲ್ಲಿ	ನಷ್ಟ ರೂ.ಗಳಲ್ಲಿ
5	ಬಳ್ಳಾರಿ	475	1187.5
6	ಬೀದರ್	533	1353.82
7	ಬಿಜಾಪುರ	157	376.8
8	ಚಾಮರಾಜನಗರ	455	1046.5
9	ಚಿಕ್ಕಮಂಗಳೂರು	754	1960.4
10	ಚಿತ್ರದುರ್ಗ	634	1458.2
11	ದಕ್ಷಿಣ ಕನ್ನಡ	708	1628.4
12	ದಾವಣಗೆರೆ	651	1562.4
13	ಧಾರವಾಡ	160	416
14	ಗದಗ	497	1143.1
15	ಗುಲ್ಬರ್ಗ	1626	3902.4
16	ಹಾಸನ	204	469.2
17	ಹಾವೇರಿ	452	1039.6
18	ಕೊಡಗು	412	1071.2
19	ಕೋಲಾರ	151	347.3
20	ಕೊಪ್ಪಳ	375	900
21	ಮಂಡ್ಯ	385	1001
22	ಮೈಸೂರು	315	693
23	ರಾಯಚೂರು	369	848.7
24	ಶಿವಮೊಗ್ಗ	296	710.4
25	ತುಮಕೂರು	378	982.8
26	ಉತ್ತರ ಕನ್ನಡ	579	1331.7
27	ಉಡುಪಿ	432	1036.8
	ಒಟ್ಟು	**12413**	**29815.02**